# ನಿತೀಶ್

## ಆತ್ಮವಿಶ್ವಾಸದ ಸಂದೇಶ

**ಭಾರತ ಕ್ರಿಕೆಟ್ ತಂಡಕ್ಕೆ ಈಗ ಸಣ್ಣ ತಲೆಬಿಸಿ. ಬ್ಯಾಟ್ಸ್‌ಮನ್‌ಗಳಲ್ಲಿ ಯಾರನ್ನು ಹೊರಗೆ ಕೂರಿಸುವುದು, ಯಾರನ್ನು ಆಡಿಸುವುದು ಎಂಬ ತಲೆನೋವು ತಂದವರಲ್ಲಿ ನಿತೀಶ್ ಕುಮಾರ್ ರೆಡ್ಡಿ ಎಂಬ ಆಲ್‌ರೌಂಡರ್ ಕೂಡ ಒಬ್ಬರು. ದೊಡ್ಡ ಸವಾಲು ಎಸೆಯುವ ಆಸ್ಟ್ರೇಲಿಯಾ ನೆಲದಲ್ಲಿ ಸಿಕ್ಕ ಮೊದಲ ಅವಕಾಶವನ್ನು ಹಣ್ಣಾಗಿಸಿಕೊಂಡ ಅಪರೂಪದ ಪ್ರತಿಭೆ 21ರ ಈ ಹುಡುಗ.**

**■ ವಿಶಾಖ ಎನ್.**

ಹೇಳಿ ಕೇಳಿ ಆಸ್ಟ್ರೇಲಿಯಾ ಎದುರಾಳಿ. ಪರ್ತ್‌ನಲ್ಲಿನ ಪುಟಿಯುವ ಪಿಚ್. ಮೊದಲ ಟೆಸ್ಟ್ ಪಂದ್ಯ ಬೇರೆ. ಭಾರತ ಆದಾಗಲೇ 73 ರನ್‌ಗಳಿಗೆ 7 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿತ್ತು. ಆಗ ಬ್ಯಾಟಿಂಗ್ ಮಾಡಲು ಬಂದವರು ನಿತೀಶ್ ಕುಮಾರ್ ರೆಡ್ಡಿ. ಇನ್ನೊಂದು ತುದಿಯಲ್ಲಿ ಅವರಿಗೆ ನೈತಿಕ ಬೆಂಬಲ ನೀಡಲು ರಿಷಭ್ ಪಂತ್ ಇದ್ದರು. ಸ್ಟಾರ್ಕ್ ವೇಗ, ಹೇಜಲ್‌ವುಡ್ ಸ್ವಿಂಗ್, ಕಮಿಂಗ್ಸ್ ಜಾಣತನದ ಬೌಲಿಂಗ್ ಎದುರಿಸಲು ನಿತೀಶ್ ಅಳುಕಲಿಲ್ಲ.

ಚುಟುಕು ಕ್ರಿಕೆಟ್ ಜಾಯಮಾನಕ್ಕೆ ಒಗ್ಗಿಕೊಂಡ ಬಿಸಿರಕ್ತದ ಹುಡುಗರಲ್ಲಿ ನಿತೀಶ್ ಒಬ್ಬರು. ಆ ಧೋರಣೆಯೇ ಪರ್ತ್ ಟೆಸ್ಟ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಭಾರತದ ನೆರವಿಗೆ ಸ್ವಲ್ಪ ಮಟ್ಟಿಗೆ ಬಂತು ಎನ್ನಬೇಕು. ಏಳನೇ ವಿಕೆಟ್ ಜೊತೆಯಾಟದಲ್ಲಿ ರಿಷಭ್ ಪಂತ್ ಜೊತೆಗೆ 48 ರನ್ ಕಲೆಹಾಕಿದ ನಿತೀಶ್, ಆಮೇಲೂ ಬಾಲಂಗೋಚಿಗಳನ್ನು ಜೊತೆಗಿಟ್ಟುಕೊಂಡೇ ಸ್ಕೋರ್ ಅನ್ನು 150ರವರೆಗೆ ಹಿಗ್ಗಿಸಿದರು. ಕೊನೆಗೆ ಅವರೇ ಔಟ್ ಆದರು. 59 ಎಸೆತಗಳನ್ನು ಎದುರಿಸಿದ ಅವರು 41 ರನ್ ಹೊಡೆದರು. ಭಾರತದ ಪರ ಆ ಇನಿಂಗ್ಸ್‌ನ ಅತಿ ಹೆಚ್ಚು ವೈಯಕ್ತಿಕ ಸ್ಕೋರ್ ಇದೇ. 6 ಬೌಂಡರಿ ಹಾಗೂ ಒಂದು ಸಿಕ್ಸರ್ ಇದ್ದ ಅವರ ಇನಿಂಗ್ಸ್ ಒಂದು ಸ್ಟೇಟ್‌ಮೆಂಟ್ ರೀತಿ ಇತ್ತು. ಭಾರತ ಕ್ರಿಕೆಟ್ ತಂಡದಲ್ಲಿ ಈಗ ಸಮರ್ಥ ಬಾಲಿಂಗ್ ಆಲ್‌ರೌಂಡರ್ ಇಲ್ಲ. ಹಾರ್ದಿಕ್ ಪಾಂಡ್ಯ ಗಾಯ ಹಾಗೂ ನೋವುಗಳಿಂದಾಗಿ ಆ ಜಾಗವನ್ನು ಟೆಸ್ಟ್ ಕ್ರಿಕೆಟ್ ಮಟ್ಟಿಗೆ ಖಾಲಿ ಉಳಿಸಿದ್ದಾರೆ. ಆ ಜಾಗಕ್ಕೆ ತಮ್ಮನ್ನು ಪರಿಶೀಲಿಸಬಹುದು ಎಂಬ ಸ್ಟೇಟ್‌ಮೆಂಟ್ ಒಂದನ್ನು ನಿತೀಶ್ ಆಟದ ಮೂಲಕ ನೀಡಿದರು.

ಎರಡನೇ ಇನಿಂಗ್ಸ್‌ನಲ್ಲಿ ಅವರು ಬರೀ 27 ಎಸೆತಗಳಲ್ಲಿ ಔಟ್ ಆಗದೆ 38 ರನ್ ಕಲೆಹಾಕಿದರು. ಎರಡು ಸಿಕ್ಸರ್ ಅವರು ಹೊಡೆದರು. ಬೌಲಿಂಗ್‌ನಲ್ಲಿ ತಮ್ಮ ಖಾತೆಗೆ ಒಂದು ವಿಕೆಟ್ ಕೂಡ ಹಾಕಿಕೊಂಡರು. ಮೊದಲ ಇನಿಂಗ್ಸ್‌ನಲ್ಲಿ ಭಾರತ ಪಡೆದ ಸಣ್ಣ ಮುನ್ನಡೆ ನಿತೀಶ್ ಹೊಡೆದ ಸ್ಕೋರ್‌ನಿಂದಾಗಿಯೇ ದಕ್ಕಿದ್ದು ಎನ್ನುವುದಕ್ಕೆ ಅಡಿಗೆರೆ ಎಳೆಯಬೇಕು.

ಆಂಧ್ರಪ್ರದೇಶದ ಗಾಜುವಾಕಾದಿಂದ ಪೋರ್ಟ್ ಸ್ಟೇಡಿಯಂಗೆ 30 ಕಿ.ಮೀ. ನಿತೀಶ್ ತಂದೆ ಮುತ್ಯಾಲ ರೆಡ್ಡಿ ಜಿಂಕ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದರು. ಬೆಳಿಗ್ಗೆ 5ಕ್ಕೇ ಎದ್ದು ಆರು ವರ್ಷದ ಮಗನನ್ನು ಆಂಧ್ರ ಕ್ರಿಕೆಟ್ ಸಂಸ್ಥೆಯ (ಎಸಿಎ) ಕ್ರೀಡಾಂಗಣಕ್ಕೆ ವ್ರತದಂತೆ ಕರೆದೊಯ್ದು, ಮಗ ಅಭ್ಯಾಸ ಮಾಡುವುದನ್ನು ಕಣ್ತುಂಬಿಕೊಂಡರು. ತಾಯಿ ಮಾನಸ ಮಗನ ಕ್ರಿಕೆಟ್‌ಗೆ ಪೂರಕವಾದ ಪೌಷ್ಟಿಕ ಆಹಾರವನ್ನು ಸೂರ್ಯ ಹುಟ್ಟುವ ತಾಸುಗಟ್ಟಲೆ ಮೊದಲೇ ಎದ್ದು ಸಿದ್ಧಪಡಿಸುತ್ತಿದ್ದರು. ಅಪ್ಪ–ಅಮ್ಮನ ಈ ತ್ಯಾಗಕ್ಕೆ ಮಗನ ಶ್ರಮವೂ ಸೇರಿ ಬೇಗ ಫಲ ಸಿಕ್ಕಿತು. 2018–19ರಲ್ಲಿಯೇ ಭರವಸೆಯ ಆಟಗಾರ ಎಂಬ ಪ್ರಶಸ್ತಿ ಈ ಹುಡುಗನಿಗೆ ಒಲಿಯಿತು.

ಕಡಪದಲ್ಲಿ 14 ವರ್ಷದೊಳಗಿನವರ ಕ್ರಿಕೆಟ್ ತಂಡಕ್ಕಾಗಿ ಅಭ್ಯಾಸ ಮಾಡುವಾಗ ಕೋಚ್‌ಗಳಾದ ಮಧುಸೂದನ್ ರೆಡ್ಡಿ ಹಾಗೂ ಎನ್. ಶ್ರೀನಿವಾಸ್, ಈ ಹುಡುಗನ ತಂತ್ರಗಾರಿಕೆಗೆ ನೀರೆರೆದರು. ಮುಂದೆ ವಿಜಯನಗರಂ ಅಕಾಡೆಮಿಯಲ್ಲಿ ಕಲಿತಾಗ, ಸಿ.ಡಿ. ಥಾಮ್ಸನ್ ಹಾಗೂ ವಿಕ್ರಮ್ ಎಂಬ ಕೋಚ್‌ಗಳು ಸಾಣೆಗೆ ಒಡ್ಡಿದರು. 2017–18ರ ಋತುವಿನಲ್ಲಿ 1200ಕ್ಕೂ ಹೆಚ್ಚು ರನ್‌ಗಳನ್ನು ವಿಜಯ್ ಮರ್ಚೆಂಟ್ ಟ್ರೋಫಿಯಲ್ಲಿ ನಿತೀಶ್ ಗಳಿಸಿದರು. 16 ವರ್ಷದೊಳಗಿನವರ ಕ್ರಿಕೆಟ್‌ನಲ್ಲಿ ಉದಯೋನ್ಮುಖ ಆಟಗಾರ ಎಂಬ ಪ್ರಶಸ್ತಿಯನ್ನು ಬಿಸಿಸಿಐ ಇದಕ್ಕಾಗಿ ನೀಡಿತು.

2021ರಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ ನೆಟ್ಸ್ ಬೌಲರ್ ಆಗಿ ನಿತೀಶ್ ಅಂಗಳ ಪ್ರವೇಶಿಸಿದರು. ಮರುವರ್ಷವೇ ಅವರನ್ನು 'ಐಪಿಎಲ್' ಕ್ರಿಕೆಟ್ ಆಡಲು 'ಸನ್ ರೈಸರ್ಸ್ ಹೈದರಾಬಾದ್' ತಂಡ ಹರಾಜಿನಲ್ಲಿ ತನ್ನದಾಗಿಸಿಕೊಂಡಿತು. ಕಳೆದ ಐಪಿಎಲ್‌ನಲ್ಲಿ 300ಕ್ಕೂ ಹೆಚ್ಚು ರನ್‌ಗಳನ್ನು ಐಪಿಎಲ್‌ನಲ್ಲಿ ಕಲೆ ಹಾಕಿದರು. ಎರಡು ಅರ್ಧ ಶತಕಗಳು ಅದರಲ್ಲಿ ಸೇರಿದ್ದವು. ಇದೇ ವರ್ಷ ಬಾಂಗ್ಲಾದೇಶದ ವಿರುದ್ಧ ಟ್ವೆಂಟಿ20 ಅಂತರರಾಷ್ಟ್ರೀಯ ಪಂದ್ಯ ಆಡುವ ಅವಕಾಶ ಅವರದ್ದಾಯಿತು. ಅಲ್ಲಿನ ಗಮನಾರ್ಹ ಪ್ರದರ್ಶನ ಈಗ ಆಸ್ಟ್ರೇಲಿಯಾ ನೆಲದಲ್ಲಿ ಆಡುವ ಅವಕಾಶ ಕಲ್ಪಿಸಿತು. ಪರ್ತ್‌ನ ಪುಟಿಯುವ ನೆಲದಲ್ಲಿ ನೆಟ್ಸ್ ಅಭ್ಯಾಸ ಮಾಡುವಾಗಲೇ ನಿತೀಶ್ ಅವರಿಗೆ ಪರಮಾನಂದ ಆಗಿತ್ತು. ಬ್ಯಾಟ್ಸ್‌ಮನ್ ನಿಲ್ಲುವ ಜಾಗದಿಂದ ಆರು ಮೀಟರ್ ದೂರಕ್ಕೆ ಚೆಂಡನ್ನು ಹಾಕಿದರೆ ಅದು ಪುಟಿಯುತ್ತಿದ್ದ ಎತ್ತರ ರೋಮಾಂಚನಗೊಳಿಸಿತು.

ಚಿಕ್ಕ ವಯಸ್ಸಿನಲ್ಲಿಯೇ ಅವರನ್ನು ಗುರುತಿಸಿ, ಪ್ರತಿಭೆಗೆ ನೀರೆರೆದವರಲ್ಲಿ ಎಂ.ಎಸ್.ಕೆ. ಪ್ರಸಾದ್ ಅವರೂ ಒಬ್ಬರು. ಈ ಹುಡುಗನ ಟೆಸ್ಟ್ ಕ್ರಿಕೆಟ್ ಪ್ರವೇಶದಲ್ಲಿ ಅವರ ಕೊಡುಗೆ ದೊಡ್ಡದಿದೆ. ಹಿಂದೂಸ್ತಾನ್ ಜಿಂಕ್ ಕಂಪನಿಯವರು ಉದಯಪುರಕ್ಕೆ ವರ್ಗಾವಣೆ ಮಾಡಿದಾಗ, ಮಗನಿಗಾಗಿ ಕೆಲಸವನ್ನೇ ಬಿಟ್ಟ ತಂದೆ ಮುತ್ಯಾಲ ರೆಡ್ಡಿ ಅವರಿಗೂ ಈಗ ಹೆಮ್ಮೆ. ಉಳಿತಾಯದ ಹಣದಲ್ಲಿ ವರ್ಷಗಟ್ಟಲೆ ಕುಟುಂಬ ನಿರ್ವಹಣೆ ಮಾಡುವ ಉಸಾಬರಿಯನ್ನು ಅವರು ಎದುರಿಸಿದ್ದರು. ಆದರೆ, ಮಗನ ಕ್ರಿಕೆಟ್ ಕಲಿಕೆಗೆ ಕಿಂಚಿತ್ತೂ ತೊಡಕು ಆಗದಂತೆ ನೋಡಿಕೊಂಡರು.

ನಿತೀಶ್ ಭವಿತವ್ಯ ಹೇಗಿರಲಿದೆ ಎನ್ನುವುದು ಮುಂದೆ ಅವರಿಗೆ ಎಷ್ಟು ಅವಕಾಶ ಸಿಗುತ್ತದೆ ಎನ್ನುವುದನ್ನು ಅವಲಂಬಿಸಿದೆ.

ಪ್ರತಿಕ್ರಿಯಿಸಿ: feedback@sudha.co.in

